ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :

### ಮೃತಪಟ್ಟ ಕಾಗೆಗಳ ಪ್ರಯೋಗಾಲಯ ಪರೀಕ್ಷಾ ವರದಿ 2-3 ದಿನಗಳಲ್ಲಿ ಲಭ್ಯ ನಿರೀಕ್ಷೆ

# ಹಕ್ಕಿ ಜ್ವರ ನಿರ್ಬಂಧಕ್ಕೆ ರಾಜ್ಯದಲ್ಲಿ ಕಟ್ಟೆಚ್ಚರ

**ಬೆಂಗಳೂರು:** ಕೇರಳದ ಆಲಪ್ಪುಳ ಮತ್ತು ಕೊಟ್ಟಾಯಂ ಜಿಲ್ಲೆಗಳಲ್ಲಿ ಬಾತುಕೋಳಿಗಳಲ್ಲಿ ಕೋಳಿಶೀತ/ಹಕ್ಕಿಜ್ವರ ಸೋಂಕು ದೃಢಪಟ್ಟಿದೆ. ರಾಜ್ಯದಲ್ಲೂ ಇದು ಕಾಣಿಸಿಕೊಳ್ಳುವ ಸಾಧ್ಯತೆಗಳಿರುವುದರಿಂದ ಎಲ್ಲಾ ಜಿಲ್ಲೆಗಳಲ್ಲಿಯೂ ಹೈಅಲರ್ಟ್ ಘೋಷಿಸಲಾಗಿದೆ.

ಕೋಳಿಶೀತ ಜ್ವರದ ಸರ್ವೇಕ್ಷಣ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಿದ್ಧತೆ ಮಾಡಿಕೊಳ್ಳಬೇಕೆಂದು ಪಶುಸಂಗೋಪನೆ ಇಲಾಖೆಯ ಅಧಿಕಾರಿಗಳು ಮತ್ತು ಪಶುವೈದ್ಯರಿಗೆ ಸೂಚಿಸಲಾಗಿದೆ ಎಂದು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇರಳ ರಾಜ್ಯಕ್ಕೆ ಹೊಂದಿಕೊಂಡಿರುವ ರಾಜ್ಯದ ಗಡಿಜಿಲ್ಲೆಗಳಾದ ದಕ್ಷಿಣ ಕನ್ನಡ, ಕೊಡಗು, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಉಪನಿರ್ದೇಶಕರು ಕೋಳಿ ಶೀತ ಜ್ವರದ ಸಂಭಾವ್ಯ ರೋಗೋದ್ರೇಕವನ್ನು ತಡೆಗಟ್ಟಲು ಜಿಲ್ಲಾಧಿಕಾರಿಗಳೊಂದಿಗೆ ಜಿಲ್ಲಾಮಟ್ಟದ ರೋಗ ನಿಯಂತ್ರಣ ಸಮಿತಿಯ ಸಭೆ ಜರುಗಿಸಿ ಸೂಕ್ತ ಮುಂಜಾಗ್ರತ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. ಸದ್ಯ ರಾಜ್ಯದಲ್ಲಿ ಯಾವುದೇ ಪ್ರಕರಣಗಳು ಕಂಡುಬಂದಿಲ್ಲ.

**ಕುಕ್ಕುಟ ಸಾಗಣೆಗೆ ಬ್ರೇಕ್:** ಕೇರಳ ರಾಜ್ಯದ ಗಡಿ ಭಾಗದಲ್ಲಿ ಕೂಡಲೇ ಚೆಕ್ ಪೋಸ್ಟಗಳನ್ನು ಸ್ಥಾಪಿಸಿ ಕೇರಳ ರಾಜ್ಯದಿಂದ ಕೋಳಿ ಹಾಗೂ ಅದರ ಉತ್ಪನ್ನಗಳ ಸಾಗಾಣಿಕೆ ನಿರ್ಬಂಧಿಸುವುದು ಹಾಗೂ, ಕೇರಳ ರಾಜ್ಯದಿಂದ ಒಳ ಬರುವ ಕೋಳಿ ಸಾಗಾಣಿಕೆ ವಾಹನಗಳನ್ನು ನೈರ್ಮಲ್ಯೀಕರಿಸಿ ಒಳಬಿಡಲು ಸೂಚಿಸಲಾಗಿದೆ. ಅಲ್ಲದೇ ತೆಗೆದುಕೊಂಡ ಕ್ರಮಗಳ ದೈನಂದಿನ ವರದಿಯನ್ನು ಉಪನಿರ್ದೇಶಕರು, ಕೋಳಿ ರೋಗ ನಿರ್ಣಯ ಪ್ರಯೋಗಾಲಯದ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ.

ಗಡಿ ಜಿಲ್ಲೆಗಳಲ್ಲಿರುವ ಕುಕ್ಕುಟ ಕ್ಷೇತ್ರಗಳಿಂದ ಪ್ರತಿ ವಾರ ರ್‍ಯಾಂಡ್‌ಂ ಆಗಿ ತಲಾ 5 ಸೀರಂ ಮಾದರಿಗಳು, 5 ಕ್ಲೋಯಕಲ್/ ಟ್ರೇಕಿಯಲ್ ಮಾದರಿಗಳು ಮತ್ತು 5 ಪರಿಸರ ಮಾದರಿಗಳನ್ನು ಸಂಗ್ರಹಿಸಿ ಮುಂದಿನ ಆದೇಶದವರೆಗೆ ಬೆಂಗಳೂರಿನ ಪ್ರಾಣಿ ಆರೋಗ್ಯ - ಜೈವಿಕ ಸಂಸ್ಥೆ ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಸಲ್ಲಿಸಲು ತಿಳಿಸಲಾಗಿದೆ.

ಎಲ್ಲಾ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಕುಕ್ಕುಟ ಕ್ಷೇತ್ರಗಳಲ್ಲಿ ವಿಶೇಷವಾಗಿ, ಪಕ್ಷಿಧಾಮ ಹಾಗೂ ನೀರು ಸಂಗ್ರಹಣ ಸ್ಥಳಗಳ ಬಗ್ಗೆ ಹೆಚ್ಚಿನ ನಿಗಾ ವಹಿಸುವುದು. ಕೋಳಿಗಳು/ಹಿತ್ತಲ ಕೋಳಿಗಳು/ ಹಕ್ಕಿಗಳು/ಕಾಡು ಹಕ್ಕಿಗಳು/ವಲಸೆ ಹಕ್ಕಿಗಳ ಯಾವುದೇ ಅಸ್ವಾಭಾವಿಕ ಮರಣ ಸಂಭವಿಸಿದಲ್ಲಿ ಅಥವಾ ರೋಗ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ಮೇಲಾಧಿಕಾರಿಗಳಿಗೆ ಮಾಹಿತಿ ನೀಡುವಂತೆ ಸಚಿವರು ಸೂಚಿಸಿದ್ದಾರೆ.



## ಹಕ್ಕಿ ಹಬ್ಬ ಅಭಾದಿತ

ಇನ್ನು ಕೇರಳದಲ್ಲಿ ಕಾಣಿಸಿಕೊಂಡಿರುವ ಹಕ್ಕಿಜ್ವರದಿಂದ ಜಿಲ್ಲೆಯ ಬಿಆರ್‌ಟಿ ರಕ್ಷಿತಾರಣ್ಯದಲ್ಲಿ ನಡೆಯುತ್ತಿರುವ ಕರ್ನಾಟಕದ 7ನೇ ಆವೃತ್ತಿಯ ಹಕ್ಕಿ ಹಬ್ಬಕ್ಕೆ ಯಾವುದೇ ತೊಂದರೆಯಿಲ್ಲ. ಅದು ನಿಗದಿಯಂತೆ ನಡೆಯುತ್ತಿದೆ ಎಂದು ಬಿಆರ್‌ಟಿ ಉಪ ಸಂರಕ್ಷಣಾಧಿಕಾರಿ ಡಾ. ಸಂತೋಷ್‌ಕುಮಾರ್ ತಿಳಿಸಿದರು.

## ಲ್ಯಾಬ್‌ಗೆ ಕಾಗೆ ಕಳೇಬರ

**ಮಂಗಳೂರು:** ಮಂಗಳೂರಿನ ಮಂಜನಾಡಿ ಗ್ರಾಮದ ಆರಂಗಡಿಯಲ್ಲಿ ಮಂಗಳವಾರ 6 ಕಾಗೆಗಳ ಸಾವಿನಿಂದ ಕರಾವಳಿಯಲ್ಲೂ ಹಕ್ಕಿ ಜ್ವರದ ಛಾಯೆ ಕಾಣಿಸಿಕೊಂಡಿದೆ. ಮೃತಪಟ್ಟ ಕಾಗೆಗಳಲ್ಲಿ ಬಹಳಷ್ಟು ಕೊಳೆತು ಎಲುಬು ಹಾಗೂ ಗರಿಗಳು ಮಾತ್ರ ಉಳಿದಿತ್ತು. ಆದರೆ ಒಂದು ಕಾಗೆಯ ಕಳೇಬರವನ್ನು ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಎಸ್‌ಆರ್‌ಡಿಎಲ್ ಲ್ಯಾಬ್‌ಗೆ ಕಳುಹಿಸಲಾಗಿದೆ. 2-3 ದಿನಗಳಲ್ಲಿ ಇದರ ಪೂರ್ಣ ವರದಿ ಬರಲಿದೆ. ಸ್ಥಳೀಯ ತಪಾಸಣೆ ಸಂದರ್ಭ ಮೃತ ಕಾಗೆಯ ರೆಕ್ಕೆಗೆ ಗಾಯವಾಗಿರುವುದು ಕಾಣಿಸಿಕೊಂಡಿದೆ. ಲ್ಯಾಬ್ ಪರೀಕ್ಷೆಯಿಂದ ಖಚಿತ ಮಾಹಿತಿ ಸಿಗಲಿದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಮೂಲಗಳು ಮಾಹಿತಿ ನೀಡಿದೆ.

## ಗಡಿಯಲ್ಲಿ ಅಲರ್ಟ್

**ಚಾಮರಾಜನಗರ:** ನೆರೆಯ ಕೇರಳ ರಾಜ್ಯದಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಅದಕ್ಕೆ ಹೊಂದಿಕೊಂಡಂತೆಯೇ ಇರುವ ಚಾ.ನಗರ ಜಿಲ್ಲೆಯ ಗಡಿಯಲ್ಲೂ ಕಟ್ಟೆಚ್ಚರ ವಹಿಸಲಾಗಿದೆ.

ಕೇರಳದಿಂದ ಜಿಲ್ಲೆಯ ಸಂಪರ್ಕ ಇರುವ ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಪಶುಪಾಲನಾ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಆ ಕಡೆಯಿಂದ ಬರುವ ವಾಹನಗಳ ಮೇಲೆ ನಿಗಾ ಇಡಲಾಗಿದೆ. ಈಗಾಗಲೇ ಕೇರಳದಿಂದ ಕೋಳಿ ಇತರೆ ಪಕ್ಷಿ ಸಾಗಣೆಯನ್ನು ನಿರ್ಬಂಧಿಸಲಾಗಿದೆ.

**ಚಿಕನ್ ಮಾರಾಟಗಾರರಲ್ಲೂ ಆತಂಕ:** ಈ ಹಿಂದೆ ಕೋವಿಡ್ ಆರಂಭದ ಸಂದರ್ಭದಲ್ಲೂ ಇದೇ ಬಗೆಯ ಹಕ್ಕಿ ಜ್ವರದ ಭೀತಿ ಆವರಿಸಿತ್ತು. ಆ ಸಂದರ್ಭದಲ್ಲಿ ಒಂದೆಡೆ ಕೋವಿಡ್ ಹಾಗೂ ಮತ್ತೊಂದೆಡೆ ಹಕ್ಕಿಜ್ವರದಿಂದಾಗಿ ಕೋಳಿಮಾಂಸ (ಚಿಕನ್) ಖರೀದಿಸುವವರ ಸಂಖ್ಯೆ ಸಾಕಷ್ಟು ಇಳಿಮುಖವಾಗಿತ್ತು. ಅಲ್ಲದೇ ಕೋಳಿಮೊಟ್ಟೆ ಹಾಗೂ ಚಿಕನ್ ಧಾರಣೆ ಸಾಕಷ್ಟು ಕುಸಿದಿತ್ತು. ಹೀಗಾಗಿ ಚಿಕನ್ ಮಾರಾಟಗಾರರು ಸಾಕಷ್ಟು ನಷ್ಟ ಅನುಭವಿಸಿದ್ದರು.

## ನಾಯಿಗಳಿಗೂ ರೋಗ: ರಾಮನಗರದ ಬೀದಿಯಲ್ಲೇ ಬಿದ್ದು ಸಾವು



**ರಾಮನಗರ:** ಕೊರೊನಾ ಮತ್ತು ಹಕ್ಕಿ ಜ್ವರದ ಮಧ್ಯೆ ರಾಮನಗರದಲ್ಲಿ ಕಳೆದ ಒಂದು ವಾರದಿಂದ ನಾಯಿಗಳು ನಿತ್ರಾಣಗೊಂಡು ಸಾಯುತ್ತಿರುವ ವಿದ್ಯಮಾನ ನಡೆದಿದ್ದು, ಆತಂಕ ಸೃಷ್ಟಿಸಿದೆ.

ಮಾಗಡಿ ತಾಲೂಕಿನ ಕೋಡಿಹಳ್ಳಿ ಪರಿಸರದಲ್ಲಿ 10ಕ್ಕೂ ಹೆಚ್ಚು ನಾಯಿಗಳು ಮೃತಪಟ್ಟಿವೆ. ಸುಮಾರು 1 ಗಂಟೆ ಕಾಲ ಕೆಮ್ಮುವ ನಾಯಿಗಳು ಬಳಿಕ ನಿತ್ರಾಣಗೊಂಡು ಮುಂದಿನ 24 ಗಂಟೆಯೊಳಗೆ ಸಾಯುತ್ತಿವೆ. ಬೀದಿ ನಾಯಿಗಳು ಮತ್ತು ಸಾಕು ನಾಯಿಗಳಲ್ಲೂ ಸಮಸ್ಯೆ ಕಾಣಿಸಿಕೊಂಡಿದೆ. ಯಾವುದೋ ವೈರಸ್ ಬಾಧೆಯಿಂದ ಈ ಸಮಸ್ಯೆ ತಲೆದೋರಿರಬಹುದು ಎಂಬ ಆತಂಕದಲ್ಲಿ ಅವುಗಳನ್ನು ದಫನ್ ಮಾಡುವುದಕ್ಕೂ ಜನರು ಭಯ ಪಡುತ್ತಿದ್ದಾರೆ.